ನೂರನೇ ಪುಟದಲ್ಲಿ ಇಟ್ಟೆ. ಮತ್ತೆ ಒಂದಿಷ್ಟು ವಿಚಿತ್ರದ, ಆದರೆ ಯಾವ ಹಕ್ಕಿಯದು ಎಂದು ತಿಳಿಯದ ಗರಿಗಳು ಸಿಕ್ಕವು. ಅವೆಲ್ಲವನ್ನು ನನ್ನ ನೋಟ್ ಬುಕ್ಕಿಗೆ ಅಂಟಿಸಿದೆ. ಹಕ್ಕಿಗಳ ಹೆಸರು ತಿಳಿಯದೆ ಒದ್ದಾಡಿದೆ. ಈ ನಡುವೆ ನವಿಲುಗರಿಯನ್ನೇ ಹೋಲುವ ಪುಟ್ಟ ಪುಟ್ಟ ಗರಿಗಳೊಂದಿಷ್ಟು ಸಿಕ್ಕಿ ತಲೆ ಕೆಡಿಸಿದವು. ಕೊನೆಗೂ ಅವು ಯಾವ ಪಕ್ಷಿಗಳದೆಂದು ತಿಳಿಯಲೇ ಇಲ್ಲ. ಆದರೆ ನೆನಪಿಗೆ ಇರಲೆಂದು ಒಂದನ್ನು ನನ್ನ ಡೈರಿಯಲ್ಲಿ ಬಚ್ಚಿಟ್ಟುಕೊಂಡೆ. ಮೇಷ್ಟ್ರು ನಿಗದಿಪಡಿಸಿದ ದಿನ ಕೊನೆಗೂ ಬಂದೇ ಬಿಟ್ಟಿತು. ಅಂದು ಶಾಲೆಯಲ್ಲಿ ಕೋಲಾಹಲ. ಮೇಷ್ಟ್ರು ಕ್ಲಾಸಿಗೆ ಬರುವವರೆಗೂ ಅವಳದ್ದನ್ನು ಇವಳು, ಇವಳದ್ದನ್ನು ಅವಳು ಕದ್ದು ನೋಡುವುದು, ನಂದೇ ಚೆಂದ, ಇಲ್ಲ... ನಂದೇ ಚೆಂದ ಎಂದು ಪೈಪೋಟಿ ನಡೆಸುತ್ತಿರುವಾಗಲೇ ಸದ್ದಿಲ್ಲದೇ ಮೇಷ್ಟ್ರು ಕ್ಲಾಸಿಗೆ ಬಂದವರೇ ಬೋರ್ಡ್ ಒರೆಸತೊಡಗಿದ್ದರು. ಅದು ತರಗತಿಗೆ ಬಂದಾಕ್ಷಣ ಅವರು ಮಾಡುತ್ತಿದ್ದ ಮೊದಲ ಕೆಲಸ. ನಾವೆಲ್ಲ ಅವರ ಆಗಮನದಿಂದಾಗಿ ಗಪ್‌ಚಿಪ್ ಆದೆವು. ಎಲ್ಲರ ಸಂಗ್ರಹಗಳಲ್ಲೂ ಅವವೇ ಕಾಗೆ, ಗುಬ್ಬಿ, ಕೋಳಿ, ಪಾರಿವಾಳ, ಗಿಳಿ, ಮರಕುಟಿಕ ಇತ್ಯಾದಿ ದಿನಂಪ್ರತಿ ಕಣ್ಣಿಗೆ ಬೀಳುವ ಅವವೇ ಪಕ್ಷಿಗಳ ಗರಿಗಳು... ಆದರ್ಶ ತಮ್ಮ ಮನೆಯಲ್ಲಿ ಟರ್ಕಿ ಕೋಳಿ ಸಾಕಿದ್ದಾರೆ... ಎಂದು ಹೇಳಿ ಅದರ ಕಪ್ಪು ಬಿಳುಪಿನ ಪಟ್ಟೆ ಪಟ್ಟೆ ರೆಕ್ಕೆಗಳನ್ನು ಅಂಟಿಸಿಕೊಂಡು ಬಂದಿದ್ದಕ್ಕೆ ಅವನಿಗೊಂಚೂ ಜಾಸ್ತಿ ಶಬ್ಬಾಸ್ ಗಿರಿ ಸಿಕ್ಕಿ ನಾವೆಲ್ಲಾ ಹೊಟ್ಟೆಉರಿಯಿಂದ ಉರಿದುಕೊಂಡೂ ಆಯಿತು. ಅಲ್ಲಿಗೆ ನಮ್ಮ ಹಕ್ಕಿಪುಚ್ಚದ ಸಂಗ್ರಹ ಕಾರ್ಯ ಮುಗಿದಿದ್ದರೂ ನನ್ನೊಳಗೆ ಅದೊಂದು ಚೆಂದದ ಗೀಳಾಗಿ ಉಳಿದುಕೊಂಡಿತು. ಅದರ ಪರಿಣಾಮ ಈಗಲೂ ಎಲ್ಲಾದರೊಂದು ಚೆಂದದ ರೆಕ್ಕೆ ಕಣ್ಣಿಗೆ ಬಿದ್ದರೆ ಸಾಕು ತಂದು ಡೈರಿಯೊಳಗೆ ಬಚ್ಚಿಟ್ಟುಬಿಡುತ್ತೇನೆ. ಬಿಡುವಿದ್ದಾಗ ಅವುಗಳನ್ನೆಲ್ಲಾ ಹರವಿಕೊಂಡು ಒಂದೊಂದನ್ನೇ ಕೈ, ಮೈ, ಮುಖ, ಕಣ್ಣ ಮೇಲೆಲ್ಲಾ ಸೋಂಕಿಸಿಕೊಳ್ಳುತ್ತಾ ಮೈಮರೆಯುತ್ತೇನೆ.

ನನ್ನ ಈ ಸಂಗ್ರಹದಲ್ಲಿ ತಮ್ಮ ಹುಟ್ಟುಹಬ್ಬಕ್ಕೆಂದು ಕೊಟ್ಟಿದ್ದ ದೊಡ್ಡ ಕಣ್ಣಿನ ಚೆಂದದ ನವಿಲುಗರಿಯೂ ಇದೆ. ಬಾಲ್ಯದಲ್ಲಿ ಮರಿಹಾಕುತ್ತದೆಂದು ಕನ್ನಡ ಪುಸ್ತಕದೊಳಗಿಟ್ಟಿದ್ದ ಚಿನ್ನಾರಿ ನವಿಲುಗರಿಯೂ ಇದೆ. ಅದಿನ್ನೂ ಮರಿ ಹಾಕಿಲ್ಲ. ನಾನು ಕಾಯುವುದನ್ನೂ ಬಿಟ್ಟಿಲ್ಲ. ಆ ದಿನಗಳ ನೆನಪುಗಳ ದೂಳು ಹಿಡಿದು ಮಲಗಿರುವ ಆ ಡೈರಿ ಇಂದಿಗೂ ಉಸಿರಾಡಿಕೊಂಡಿದೆ. ಕಸವೆಂದೋ ಅನುಪಯುಕ್ತವೆಂದೋ ಬರಿದೆ ವ್ಯಾಪಾರದ ದೃಷ್ಟಿಯಿಂದ ಪರಿಗಣಿಸಿ ತಿಪ್ಪೆ ಪಾಲು ಮಾಡುವುದು ನನಗೆ ಸಾಧ್ಯವಿಲ್ಲ. ಮನೆಯೇ ತಿಪ್ಪೆಯಾದರೂ ಅವನ್ನೆಲ್ಲಾ ಬೆಚ್ಚಗೆ ಮನೆಯಲ್ಲಿಟ್ಟುಕೊಳ್ಳುವುದು ನನ್ನದೇ ದೈಹಿಕ, ಮಾನಸಿಕ ಆರೋಗ್ಯದ ದೃಷ್ಟಿಯಿಂದ ಮುಖ್ಯವೆನಿಸುತ್ತದೆ.

ಒಮ್ಮೆ ಹೀಗೆ ತರಗತಿಯಲ್ಲಿ ಹುಡುಗನೊಬ್ಬ ಐದಾರು ನವಿಲುಗರಿಗಳನ್ನು ಹಿಡಿದು ತಂದಿದ್ದ. ಪುಣ್ಯಕ್ಕೆ ಈ ತರಗತಿಯಲ್ಲಿ ನಾನು ಶಿಕ್ಷಕಿಯಾಗಿದ್ದೆ ಮತ್ತು ಅವನು ನನ್ನ ವಿದ್ಯಾರ್ಥಿ. ಎಲ್ಲಿಂದ ಹೇಗೆ ತಂದಿದ್ದೋ ಎಂದು ಕೇಳಿದ್ದಕ್ಕೆ ಊರ ಹೊರಗಿನ ಬೆಟ್ಟಗಳಲ್ಲಿ ತುಂಬಾ ನವಿಲುಗಳಿವೆ, ಕುರಿಕಾಯುವುದಕ್ಕೋ ದನ ಮೇಯಿಸಲೆಂದೋ ಬೆಟ್ಟಗಳಿಗೆ ಹೋದಾಗ ಅಲ್ಲಿ ಸಿಗುವ ನವಿಲುಗರಿಗಳನ್ನು ನಮ್ಮಪ್ಪ ಮನೆಗೆ ತರುತ್ತಾರೆಂದು ಹೇಳಿದ. ನನಗೆ ಆಸೆ ಹುಟ್ಟಿಬಿಟ್ಟಿತು. 'ಏ ನಿಮಗೆ ಜಾಸ್ತಿ ನವಿಲುಗರಿಗಳು ಸಿಕ್ರೆ ನಂಗೆ ತಂದು ಕೊಡ್ರೋ...' ಎಂದು ಕೇಳಿಕೊಂಡೆ. ಮರುದಿನ ನಾನು ಬರುವಷ್ಟರಲ್ಲಿ ನನ್ನ ಟೇಬಲ್ ತುಂಬಾ ನವಿಲುಗರಿಗಳೋ ಗರಿಗಳು! ಅರೆ, ನನಗೆ ಖುಷಿಯೋ ಖುಷಿ! ಏನು ಮಾಡಲಿ... ಎಂಬಷ್ಟು ಆನಂದತುದಿಲ ಮನಸ್ಸು... ಇವನ್ನೆಲ್ಲಾ ಬೆನ್ನಿಗೆ ಹಚ್ಚಿಕೊಂಡು ಆಕಾಶಕ್ಕೆ ಹಾರಲಾ?! ಅಯ್ಯ... ನವಿಲಿಗೇ ಆ ಪರಿ ರೆಕ್ಕೆ ಇಟ್ಟುಕೊಂಡು ಹಾರಲು